# ಪ್ರಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ಕ್ಯಾಶ್‌ಲೆಸ್ ಹಣಪಾವತಿ ಕುರಿತು ಜನಜಾಗೃತಿ ಮೂಡಿಸುತ್ತಿರುವ ಬೆಂಗಳೂರಿನ 5ನೇ ತರಗತಿ ಬಾಲಕಿ ಹಾರಿಕಾ

ಸಂಪುಟ : 38 ಸಂಚಿಕೆ : 10 ದುರ್ಮುಖಿ–ಪುಷ್ಯ ಕಲಿಯುಗಾಬ್ದ 5118 1–1–2017 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಸೇವೆಯೇ ಅಧ್ಯಾತ್ಮದ ಮೆಟ್ಟಿಲು

• ಬೆಂಗಳೂರಿನಲ್ಲಿ 5 ದಿನಗಳ 'ಹಿಂದು ಆಧ್ಯಾತ್ಮಿಕ ಮತ್ತು ಸೇವಾ ಮೇಳ'ಕ್ಕೆ ತೆರೆ • 250ಕ್ಕೂ ಅಧಿಕ ಮಳಿಗೆಗಳು • 3 ಲಕ್ಷ ಸಾರ್ವಜನಿಕರು ಭೇಟಿ

ಹಿಂದುಧರ್ಮದ ಆಧ್ಯಾತ್ಮಿಕ ಶಕ್ತಿ ಹಾಗೂ ಸೇವಾವ್ಯಾಪ್ತಿಯನ್ನು ಸಮಾಜಕ್ಕೆ ಪರಿಚಯಿಸುವ ಉದ್ದೇಶದಿಂದ ಡಿಸೆಂಬರ್ 14 ರಿಂದ 18ರ ತನಕ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ 'ಹಿಂದು ಆಧ್ಯಾತ್ಮಿಕ ಮತ್ತು ಸೇವಾ ಮೇಳ' (Hindu Spiritual and Service Fair- HSSF) ನಡೆಯಿತು. ಈ ಮೇಳವು ಆಧ್ಯಾತ್ಮಿಕ, ಸೇವಾ ಸಂಘಟನೆಗಳಿಗೆ ಒಂದು ಉತ್ತಮ ವೇದಿಕೆ ಒದಗಿಸಿದ್ದಲ್ಲದೇ, ಜನಸಾಮಾನ್ಯರೂ ಉತ್ತೇಜಿತಗೊಂಡು ಸೇವಾ ಕಾರ್ಯಗಳಲ್ಲಿ ಭಾಗವಹಿಸಲು, ಸಾಮಾಜಿಕ ಪರಿವರ್ತನೆಯಲ್ಲಿ ತೊಡಗಿಕೊಳ್ಳಲು ಸಹಕಾರಿಯಾಯಿತು. ಅರಣ್ಯ ಹಾಗೂ ವನ್ಯ ಮೃಗಗಳ ಸಂರಕ್ಷಣೆ, ಪರಿಸರ ಸಂರಕ್ಷಣೆ, ಮಹಿಳೆಯರನ್ನು ಗೌರವಾದರಗಳಿಂದ ಕಾಣುವುದು, ಸುಸ್ಥಿರ ವಾತಾವರಣ ನಿರ್ಮಾಣ, ಕೌಟುಂಬಿಕ, ಮಾನವ ಮೌಲ್ಯಗಳ ಬೋಧನೆ, ದೇಶಭಕ್ತಿ ಜಾಗರಣೆ – ಇವೇ ಕಾರ್ಯಕ್ರಮದ ಮೂಲ ಉದ್ದೇಶವಾಗಿತ್ತು.

ಈ ಬೃಹತ್ ಸಮಾವೇಶದಲ್ಲಿ ಕರ್ನಾಟಕ ಮೂಲದ 250ಕ್ಕೂ ಹೆಚ್ಚು ಹಿಂದೂ ಸಾಮಾಜಿಕ–ಧಾರ್ಮಿಕ ಸೇವಾ ಸಂಸ್ಥೆಗಳು ತಮ್ಮ ಸೇವಾ ಚಟುವಟಿಕೆಗಳನ್ನು ತಮ್ಮ ಮಳಿಗೆಗಳಲ್ಲಿ ಪ್ರದರ್ಶಿಸಿದರು. ಆ ಪೈಕಿ ಕೆಲವು ಮಳಿಗೆಗಳ ಕುರಿತಾದ ವಿಶೇಷ ವರದಿ ನಿಮಗಾಗಿ ಇಲ್ಲಿದೆ.

## ನಿಮಿತ್ತೇಕಂ

ಕೆಲ ಉತ್ಸುಕ ಸ್ವಯಂಸೇವಕರು ಒಟ್ಟಿಗೆ ಸೇರಿ ಕಟ್ಟಿಕೊಂಡಿರುವ ಈ ಸಂಸ್ಥೆ ಪಾಕಿಸ್ತಾನ ಹಾಗೂ ಬಂಗ್ಲಾದೇಶದಲ್ಲಿ ನೆಲೆಸಿರುವ ಹಿಂದೂ ಹಾಗೂ ಸಿಖ್ಖರ ಮಾನವ ಹಕ್ಕು ಉಲ್ಲಂಘನೆಯ ಕುರಿತಾಗಿ ದನಿ ಎತ್ತುತ್ತಿದೆ. ಇತ್ತ ಬಂಗ್ಲಾದೇಶದಲ್ಲಿಯೂ ಕಥೆ ವಿಭಿನ್ನವಾಗಿರಲಿಲ್ಲ. ಪಾಕಿಸ್ತಾನದ ಮಾನವ ಹಕ್ಕು ಆಯೋಗದ ಅಂಕಿ ಅಂಶಗಳ ಪ್ರಕಾರ ತಿಂಗಳಿಗೆ 15 ಹಿಂದೂ ಹೆಣ್ಣು ಮಕ್ಕಳು ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಪಾಕಿಸ್ತಾನದ ರಚನೆಯಾದಾಗ ಶೇ. 15ರಷ್ಟಿದ್ದ ಹಿಂದೂ ಜನಸಂಖ್ಯೆ ಇಂದು ಶೇ. 1ಕ್ಕೆ ಇಳಿದಿದೆ. ಬಲವಂತದ ಮತಾಂತರ, ಸುಲಿಗೆ, ಕೊಲೆ, ದರೋಡೆಗಳು ಅಲ್ಲಿನ ಹಿಂದುಗಳು ನಿತ್ಯ ಅನುಭವಿಸುತ್ತಿರುವ ಬವಣೆ. ಇದನ್ನು




ಹೋಗಲಾಡಿಸಲು ಅಲ್ಲಿನ ಹಿಂದೂಗಳನ್ನು ಭಾರತಕ್ಕೆ ವಾಪಸ್ಸು ಕರೆತರಲು ಪ್ರಯತ್ನಗಳನ್ನು 'ನಿಮಿತ್ತೇಕಂ' ಮಾಡುತ್ತಿದೆ. 2014ಕ್ಕಿಂತ ಮೊದಲು ಸಂಸ್ಥೆಯ ಕೆಲಸ ಆರಂಭವಾಗಿದ್ದು ನರೇಂದ್ರ ಮೋದಿಯವರು ಪರೋಕ್ಷವಾಗಿ ಅಲ್ಲಿನ ದೌರ್ಜನ್ಯದ ಬಗ್ಗೆ ದನಿ ಎತ್ತಿರುವುದರಿಂದ ಸಂಸ್ಥೆ ಇನ್ನಷ್ಟು ಆಸ್ಥೆಯಿಂದ ಕೆಲಸ ಮಾಡಲು ಸಹಾಯವಾಗಿದೆ. ನೂರಾರು ಜನರನ್ನು ಭಾರತಕ್ಕೆ ಕರೆತಂದು, ನೆಲೆ ನೀಡಿರುವ ಸಂಸ್ಥೆ, ತನ್ನ ಅಂದಾಜನ್ನು ಹೀಗೆ ಮುಂದಿಡುತ್ತದೆ– "ಒಂದು ಕೋಟಿ ಭಾರತೀಯರು ನೂರು ರೂಪಾಯಿಯನ್ನು ಮೀಸಲಿಟ್ಟರೆ ಪಾಕಿಸ್ತಾನದ ಹಿಂದುಗಳನ್ನೆಲ್ಲಾ ಸುರಕ್ಷಿತವಾಗಿ ನಮ್ಮ ದೇಶದಲ್ಲೇ ನೆಲೆಯಾಗಿಸಬಹುದು. ಇದರಿಂದ ಕೇವಲ ಹಿಂದುಗಳು ಸುರಕ್ಷಿತ ಎಂಬುದಲ್ಲದೇ ಪಾಕಿಸ್ತಾನದ ಅರ್ಥವ್ಯವಸ್ಥೆಯೂ ಕೊಂಚ ಮಟ್ಟಿಗೆ ಅಲುಗುತ್ತದೆ. ಕಾರಣ ಈ ಶೇ. 1 ಜನರೇ ಪಾಕಿಸ್ತಾನದ ಶೇ. 15 ಅರ್ಥವ್ಯವಸ್ಥೆಯಲ್ಲಿ ಭಾಗಿಯಾಗಿದ್ದಾರೆ". ರಾಜಸ್ತಾನದ ಜೈಪುರದಲ್ಲಿ ಕೇಂದ್ರವಿರುವ ಈ ಸಂಸ್ಥೆ ಪಾಕಿಸ್ತಾನದಲ್ಲಿ ತುಳಿತಕ್ಕೊಳಗಾಗಿರುವ ಹಿಂದೂಗಳನ್ನು ಭಾರತಕ್ಕೆ ಕರೆತಂದು ಅವರಿಗೊಂದು ನೆಲೆ ಕಲ್ಪಿಸುವ ಕಾರ್ಯದಲ್ಲಿ ನಿರತವಾಗಿದೆ. ವಲಸೆ ಬಂದ ಮಕ್ಕಳ ವಿದ್ಯಾಭ್ಯಾಸಕ್ಕೂ ವಿಶೇಷ ಯೋಜನೆ ಸಿದ್ಧಪಡಿಸಿದೆ. ಒಬ್ಬ ವ್ಯಕ್ತಿಯನ್ನು ಪಾಕಿಸ್ತಾನದಿಂದ ಭಾರತಕ್ಕೆ ಕರೆತರಲು ಸರ್ಕಾರದ ಶುಲ್ಕಗಳು, ಪ್ರಯಾಣ ಸೇರಿ ಸುಮಾರು 12,000 ರೂ. ವೆಚ್ಚವಾಗಬಹುದು ಎಂಬುದು ಸಂಸ್ಥೆಯ ಲೆಕ್ಕಾಚಾರ.

## ಜೇನುಗೂಡು ಸಂಸ್ಥೆ

'ಸ್ವಚ್ಛ ಭಾರತ ಅಭಿಯಾನ' ಘೋಷಣೆಯಾದ ಕೆಲದಿನಗಳಲ್ಲಿ ಈ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿಯಲ್ಲಿ ಹುಟ್ಟಿಕೊಂಡ ಸಂಸ್ಥೆ 'ಜೇನುಗೂಡು'. ಸಮಾಜಮುಖಿ ಕಾರ್ಯಗಳಲ್ಲಿ ಸದಾ ತೊಡಗಿಕೊಂಡು ಸ್ವಚ್ಛ ಸಮಾಜವನ್ನು




ಕಾಣಬಯಸುವ ಈ ತಂಡದಲ್ಲಿ ಸುಮಾರು 200 ಸ್ವಯಂಸೇವಕರಿದ್ದಾರೆ. ಕೆರೆ, ಕಲ್ಯಾಣಿ ಸ್ವಚ್ಛತೆ ಕಾರ್ಯ ಮಾಡಿದ್ದು ಬಸವಣ್ಣನವರ ಜನ್ಮಸ್ಥಳದಲ್ಲಿನ ಬಸವನತೀರ್ಥವನ್ನು ಹಲವು ಬಾರಿ ಸ್ವಚ್ಛಗೊಳಿಸಿ ಜನರಲ್ಲಿ ಜಾಗೃತಿಯನ್ನೂ ಮೂಡಿಸಿದ್ದಾರೆ. ಬಸ್ ನಿಲ್ದಾಣ, ಸರ್ಕಾರಿ ಕಚೇರಿಯ ಗೋಡೆಗಳು, ತಮ್ಮ ಊರುಗಳಲ್ಲಿ ಶೌಚಾಲಯ ನಿರ್ಮಾಣ ಸೇರಿದಂತೆ ಹಲವಾರು ಸಮಾಜಪರವಾದ ಕಾರ್ಯಗಳನ್ನು ಇವರು ಮಾಡುತ್ತಿದ್ದಾರೆ. 'ಮೊದಲು ನಾವು ಬದಲಾಗೋಣ. ನಂತರ ಸಮಾಜವನ್ನು ಬದಲಿಸೋಣ' ಎಂಬ ಧ್ಯೇಯವಾಕ್ಯದಂತೆ ಸಂಸ್ಥೆಯ ಸದಸ್ಯರು ತಮ್ಮನ್ನೂ ತಿದ್ದಿಕೊಳ್ಳುತ್ತಾ ಸಮಾಜವನ್ನೂ ಸ್ವಚ್ಛಗೊಳಿಸುವಲ್ಲಿ ನಿರತರಾಗಿದ್ದಾರೆ. ತಮ್ಮ ಎಲ್ಲಾ ಕೆಲಸಗಳಿಗೂ ತಮ್ಮ ಜೇಬಿನಿಂದಲೇ ಹಣ ಬಳಸುತ್ತಿರುವ ಈ ತಂಡಕ್ಕೆ ಸ್ವಯಂಸೇವಕರಾಗಿಯೋ, ಧನಸಹಾಯ ಮಾಡುವ ಮೂಲಕವೂ ಭಾಗವಹಿಸಬಹುದಾಗಿದೆ.

## ನೈಸರ್ಗಿಕ ಕೃಷಿ ಹಾಗೂ ಸಿರಿಧಾನ್ಯಗಳ ಬಳಕೆ



ಪದ್ಮಶ್ರೀ ಪುರಸ್ಕೃತ ಸುಭಾಷ್ ಪಾಳೇಕರ್ ಅವರ ಶೂನ್ಯ ಬಂಡವಾಳದ ಆಧ್ಯಾತ್ಮಿಕ/ನೈಸರ್ಗಿಕ ಹಾಗೂ ರಾಸಾಯನಿಕ ಮುಕ್ತ ಕೃಷಿ ಅವಲಂಬಿತವಾಗಿರುವುದು ದೇಸಿ ಆಕಳ ಸಗಣಿ, ಗಂಜಲ, ಕರಿ ಬೆಲ್ಲ, ದ್ವಿದಳ ಧಾನ್ಯದ ಹಿಟ್ಟಿನಿಂದ ತಯಾರಾದ ಜೀವಾಮೃತ ಎಂಬ ಪೋಷಕದ್ರವ್ಯ.

ಬೀಜಾಮೃತದಿಂದ ನಾಟಿ ಬೀಜಗಳನ್ನು ಉಪಚರಿಸಿ ಬಿತ್ತನೆ ಮಾಡಿ ಆಹಾರ ಧಾನ್ಯ, ತರಕಾರಿಯನ್ನು ಬೆಳೆದು ಯಾವ ಜೀವಿಗೂ ಹಾನಿ ಮಾಡದೆ (ಆಧ್ಯಾತ್ಮಿಕ ರೀತಿ) ನಮ್ಮ ಬೆಳೆಯನ್ನು ತೆಗೆದುಕೊಳ್ಳಬಹುದು ಎಂದು ಈಗಾಗಲೇ ನಿರೂಪಿಸಿರುವ ಸುಭಾಷ್ ಪಾಳೇಕರ್ ತಮ್ಮ ಪದ್ಧತಿಯಿಂದ ಉತ್ತಮ ಬೆಳೆಬೆಳೆಯುವುದಲ್ಲದೇ ಅಂತರ್ಜಲ ಮಟ್ಟವನ್ನು ವೃದ್ಧಿಸಲು, ಜಾಗತಿಕ ತಾಪಮಾನವನ್ನು, ಅತಿವೃಷ್ಟಿ, ಅನಾವೃಷ್ಟಿಯನ್ನು ತಡೆಯಲು ಇದು ಬ್ರಹ್ಮಾಸ್ತ್ರವೆಂದು ಪ್ರಚಾರಪಡಿಸುತ್ತಾರೆ. ಇನ್ನು ಇಂದಿನ ದಿನದಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿರುವ ಡಯಾಬಿಟಿಸ್, ರಕ್ತದೊತ್ತಡದ ಸಮಸ್ಯೆಗಳಿಗೆ ಸಿರಿಧಾನ್ಯಗಳ(millets) ಬಳಕೆಯೇ ಸೂಕ್ತ ಎಂಬುದು ಒಂದು ವಾದ. ಸಿರಿಧಾನ್ಯಗಳನ್ನು ಬೆಳೆಯಲು ತಗಲುವ ನೀರಿನ ವೆಚ್ಚವೂ ಕಡಿಮೆ ಎಂಬುದು ಈಗಾಗಲೆ ತಿಳಿದುಬಂದಿದೆ. ಈ ಬೆಳೆಯನ್ನು ತೆಗೆಯಲು ತಗಲುವ ಖರ್ಚು, ಸಮಯ, ಭತ್ತ, ಗೋಧಿ, ರಾಗಿಗಳಿಗಿಂತಲೂ ಕಡಿಮೆಯಾದ್ದರಿಂದ ಹಲವು ರೈತರು ಸಿರಿಧಾನ್ಯಗಳನ್ನು ಬೆಳೆಯುವತ್ತ ಮುಖ ಮಾಡುತ್ತಿದ್ದಾರೆ.

## ದೇಸಿ ಗೋ ತಳಿಗಳ ಸಂರಕ್ಷಣೆ, ಅಗ್ನಿಗೋತ್ರ

ಹಲವು ಮಠಗಳು, ಸಾಮಾಜಿಕ ಕಾರ್ಯಕರ್ತರ ಸಂಸ್ಥೆಗಳು ದೇಸಿ ಗೋ ತಳಿಗಳನ್ನು ಸಂರಕ್ಷಿಸುವ, ದೇಸಿ ಹಸುವಿನ ಉತ್ಪನ್ನಗಳನ್ನು ಕೊಳ್ಳುವುದರಿಂದ ಆ ನಿಟ್ಟಿನಲ್ಲಿ ನಡೆಯಬಹುದಾದ ಸೇವೆಯನ್ನು ಬಿಂಬಿಸುವ ಮಳಿಗೆಗಳಿದ್ದವು. 'ಗಾವೋ ವಿಶ್ವಸ್ಯ ಮಾತರಃ' ಎಂಬ ವೇದೋಕ್ತಿಯನ್ನು ಪರಿಚಯಿಸುವ, ದೇಸಿ ಹಸುಗಳ ಹಾಲಿನ ವಿಶೇಷತೆ, ಔಷಧೀಯ ಗುಣ ಹಾಗೂ ಅದರಿಂದ ಇನ್ನಷ್ಟು ಗೋ-ತಳಿಗಳನ್ನು ವೃದ್ಧಿಸುವ ಕುರಿತಾದ ಮಳಿಗೆಗಳು ಆಕರ್ಷಣೀಯವಾಗಿದ್ದವು. ಅಲ್ಲದೇ 'ಅಗ್ನಿಹೋತ್ರ'ದ ಮಹತ್ವವನ್ನು ಜನರಿಗೆ ತಿಳಿಸಿಕೊಡುವ ಸಲುವಾಗಿ ಕೆಲ ಮಳಿಗೆಗಳು ಮೀಸಲಿದ್ದವು. ವೈಜ್ಞಾನಿಕವಾಗಿ ಅಗ್ನಿಹೋತ್ರದಿಂದ ಆ ಮನೆಗೆ, ಪ್ರದೇಶಕ್ಕೆ ಆಗುವ ಲಾಭದ ಕುರಿತಾಗಿ ಹಲವಾರು ಪ್ರಯೋಗಗಳು ಈಗಾಗಲೆ ನಡೆದಿವೆ. ಅನಂತ ಭಾರತ ಚಾರಿಟೆಬಲ್ ಟ್ರಸ್ಟ್‌ನವರು ಎಚ್‌ಐವಿ ಪೀಡಿತರಿಂದ ಅಗ್ನಿಹೋತ್ರವನ್ನು ನಡೆಸಿ ಅವರಲ್ಲಿ 3ಲಕ್ಷದಷ್ಟಿದ್ದ ವೈರಾಣುಗಳು ಕ್ರಮೇಣ ಇಳಿದಿರುವ ಬಗ್ಗೆ ಹೇಳಿಕೊಂಡರು. ಅಗ್ನಿಹೋತ್ರದ ಬಗ್ಗೆ ಸಾಕಷ್ಟು ಪ್ರಯೋಗಗಳನ್ನು ಮಾಡಿರುವ ಹಾಗೂ ಆ ಮೂಲಕ ವಿಕಿರಣದ ಪ್ರಮಾಣ ಕಡಿಮೆಯಾದ ಬಗ್ಗೆ ಜರ್ಮನಿಯ ಉಲ್ರಿಚ್ ಬರ್ಗ್ ಸಹ ನಿರೂಪಿಸಿದ್ದಾರೆ.




## ಸಂಸ್ಕೃತ ಕಲಿಕೆ

ಸಂಸ್ಕೃತ ದೇವ ಭಾಷೆ ಎಂದು ಹೇಳುತ್ತಲೇ ಮೂದಲಿಸುತ್ತಿದ್ದ ದಿನಗಳು ಇಂದು ನಮ್ಮ ಮುಂದಿಲ್ಲ. ಪ್ರತಿ ಗ್ರಾಮದಲ್ಲೂ ಸಂಸ್ಕೃತ ಭಾಷೆಯನ್ನಾಡುವವರ ಸಂಖ್ಯೆ ಹೆಚ್ಚಬೇಕು, ಸಂಸ್ಕೃತ ಕಲಿಯಲು ಕಷ್ಟ ಎಂಬ ಮಿಥ್ಯೆಯನ್ನು ಹೋಗಲಾಡಿಸುವ ಸಲುವಾಗಿ ವಿಶ್ವದಾದ್ಯಂತ ಆರೆಸ್ಸೆಸ್ ಪ್ರೇರಿತ ಸಂಘಟನೆಯಾದ 'ಸಂಸ್ಕೃತ ಭಾರತಿ' ಕಾರ್ಯನಿರ್ವಹಿಸುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಅಂತೆಯೇ ಇತರೆ ಸಂಸ್ಥೆಗಳು ಸಂಸ್ಕೃತ ಕಲಿಕೆಯನ್ನು ವಿವಿಧ ಮಾರ್ಗಗಳಲ್ಲಿ ಜನರಿಗೆ ಮುಟ್ಟಿಸುವ ಕೆಲಸ ನಡೆಸುತ್ತಿವೆ. ವ್ಯೋಮ ಲ್ಯಾಬ್ಸ್ ಎಂಬ ಸಂಸ್ಥೆಯು ಸಂಸ್ಕೃತ ಕಲಿಕೆಗಾಗಿ ಸಿಡಿಗಳನ್ನು ಕಡಿಮೆ ದರದಲ್ಲಿ ಮಾರುಕಟ್ಟೆಗೆ ಪರಿಚಯಿಸಿದೆ. ಇನ್ನು ವಿಭು ಅಕಾಡೆಮಿಯಿಂದಲೂ ಉಚಿತ ಸಂಸ್ಕೃತ ಶಿಬಿರಗಳು, ಆನ್‌ಲೈನ್ ಮೂಲಕ ಕಲಿಯುವ ಅವಕಾಶಗಳನ್ನು ಜನರ ಮುಂದಿಡುವ ಕೆಲಸವನ್ನು ಮಾಡುತ್ತಿವೆ. ಒಟ್ಟಿನಲ್ಲಿ ಉತ್ತಮ ಸಂಸ್ಕಾರಗಳನ್ನು ಮನುಷ್ಯರಲ್ಲಿ ಬಿತ್ತುವ ಕೆಲಸವೇ ಸಂಸ್ಕೃತ ಭಾಷೆಯನ್ನು ಕಲಿಯುವ ಉದ್ದೇಶ ಎಂಬುದನ್ನು ಪ್ರಚುರ ಪಡಿಸುವ ಮಳಿಗೆಗಳು ಇದ್ದವು.




## ಸಂತ ತ್ಯಾಗರಾಜರು

ತಂಜಾವೂರು ಜಿಲ್ಲೆಯ ತಿರುವಾರೂರಿನಲ್ಲಿ ರಾಮಬ್ರಹ್ಮಮ್ ಮತ್ತು ಸೀತಮ್ಮನವರ ಪುತ್ರರಾಗಿ ತ್ಯಾಗರಾಜರು (4 ಮೇ 1767 – 6 ಜನವರಿ 1847) ಜನಿಸಿದರು. ಅಜ್ಜ ಗಿರಿರಾಜ ಕವಿ ತಂಜಾವೂರಿನ ಆಸ್ಥಾನದಲ್ಲಿ ಕವಿ-ಸಂಗೀತಗಾರರಾಗಿದ್ದರು. ಶ್ರೀ ತ್ಯಾಗರಾಜರು ಕರ್ನಾಟಕ ಸಂಗೀತ ಪದ್ಧತಿಯ ಪ್ರಮುಖ ರಚನಕಾರರು. ಚಿಕ್ಕಂದಿನಲ್ಲಿ, ತಮ್ಮ ತಾಯಿ ಹಾಡುತ್ತಿದ್ದ ಪುರಂದರದಾಸರ ದೇವರನಾಮಗಳಿಂದ ತ್ಯಾಗರಾಜರು ಪ್ರಭಾವಿತರಾಗಿದ್ದರೆಂದು ಹೇಳಲಾಗಿದೆ. ಇವರ ಹಲವು ಕೃತಿಗಳು ಪುರಂದರದಾಸರ ಕೆಲವು ಪದಗಳಲ್ಲಿ ಇರುವ ಭಾವನೆಯನ್ನೇ ವ್ಯಕ್ತಪಡಿಸುವುದು ಗಮನಾರ್ಹ.

ತಮ್ಮ ಕಾಲದಲ್ಲಿ ಹೆಚ್ಚು ಪ್ರಚಲಿತವಿಲ್ಲದ ಹಲವಾರು ರಾಗಗಳಲ್ಲಿ ಕೃತಿ ರಚನೆ ಮಾಡಿರುವುದು ತ್ಯಾಗರಾಜರ ಮತ್ತೊಂದು ಹೆಗ್ಗಳಿಕೆ. ಖರಹರಪ್ರಿಯ, ಹರಿಕಾಂಭೋಜಿ ಮೊದಲಾದ ಕೆಲವು ಮೇಳಕರ್ತರಾಗಗಳನ್ನು ಪ್ರಸಿದ್ಧಿಗೆ ತಂದವರು ಅವರೇ. ಘನರಾಗಗಳಾದ ನಾಟ, ಗೌಳ, ಆರಭಿ, ವರಾಳಿ ಮತ್ತು ಶ್ರೀ ರಾಗಗಳಲ್ಲಿ ಇವರು ರಚಿಸಿರುವ ವಿಶೇಷ ಕೃತಿಸಮೂಹವು ಘನರಾಗ ಪಂಚರತ್ನ ಎಂದು ಪ್ರಸಿದ್ಧಿಪಡೆದಿದೆ.



**ಜನವರಿ 6 ಪುಣ್ಯತಿಥಿ–ಆರಾಧನೆ**

ತ್ಯಾಗರಾಜರ ಆಡುಭಾಷೆ ತೆಲುಗು. ಸಂಸ್ಕೃತದಲ್ಲಿಯೂ ಅವರದು ಪ್ರಗಲ್ಭವಾದ ಪಾಂಡಿತ್ಯ. ಸಂಸ್ಕೃತದಲ್ಲಿ ರಚಿತವಾಗಿರುವ ಅವರ ಕೃತಿಗಳೂ ಗಣನೀಯ. ಜಗದಾನಂದಕಾರಕ(ನಾಟ), ಸಾಮಜವರಗಮನ (ಹಿಂದೋಳ), ಸುಜನ ಜೀವನ (ಖಮಾಚ್), ಈಶ ಪಾಹಿ ಮಾಂ (ಕಲ್ಯಾಣಿ), ಕ್ಷೀರಸಾಗರ ವಿಹಾರ (ಆನಂದ ಭೈರವಿ), ನಾದತನುಮನಿಶಂ (ಚಿತ್ತರಂಜನಿ), ನಿರವಧಿ ಸುಖದ (ರವಿಚಂದ್ರಿಕಾ), ದೇವಾದಿ ದೇವ ಮೊದಲಾದವು ಅವರ ಪ್ರಸಿದ್ಧವಾದ ಸಂಸ್ಕೃತ ರಚನೆಗಳಲ್ಲಿ ಕೆಲವು.

ತ್ಯಾಗರಾಜರು ಶ್ರೀರಾಮನ ದರ್ಶನವನ್ನು ಪಡೆದು ಕೃತಕೃತ್ಯರಾದವರೆಂಬುದು ಅವರದೇ ಆದ ಗಿರಿಪೈನೆಲಕೇನ-ಶಹನ, ಭವನುತ-ಮೋಹನ, ಪರಮಾತ್ಮುಡು-ವಾಗಧೀಶ್ವರಿ, ಕನುಗೊಂಟನಿ-ಬಿಲಹರಿ ಮುಂತಾದ ಕೆಲವು ರಚನೆಗಳಿಂದ ತಿಳಿದುಬರುತ್ತದೆ. ತಮ್ಮ ನಿರ್ಯಾಣ ಸಮಯ ಸಮೀಪಿಸುತ್ತಿರುವದನ್ನರಿತ ತ್ಯಾಗರಾಜರು ನಾದಬ್ರಹ್ಮಾನಂದರೆಂಬ ಆಶ್ರಮನಾಮದಿಂದ ಸನ್ಯಾಸದೀಕ್ಷೆಯನ್ನು ಸ್ವೀಕರಿಸಿ, ಪರಾಭವ ಸಂವತ್ಸರ ಪುಷ್ಯ ಬಹುಳ ಪಂಚಮಿ (6–1–1847)ಯಂದು ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿ ವಿಶ್ವಾತ್ಮನಲ್ಲಿ ಲೀನವಾದರು.

ಕರ್ನಾಟಕ ಸಂಗೀತಕ್ಕೆ ತ್ಯಾಗರಾಜರ ಕಾಣಿಕೆಯ ನೆನಪಾಗಿ ಪ್ರತಿ ವರ್ಷ ತಿರುವಯ್ಯಾರಿನಲ್ಲಿ ಪುಷ್ಯ ಬಹುಳ ಪಂಚಮಿಯಂದು (ಜನವರಿ ಅಥವಾ ಫೆಬ್ರವರಿ ತಿಂಗಳುಗಳ ಸಮಯ) "ತ್ಯಾಗರಾಜ ಆರಾಧನೆ" ನಡೆಯುತ್ತದೆ.

ಭಾರತೀಯ ಮೌಲ್ಯಗಳು, ಪುರಾಣ ಪುರುಷರ ಪರಿಚಯ, ಸ್ತ್ರೀ ಸಂಘಗಳು, ಸ್ತ್ರೀಯರಿಗೇ ಇರುವ ಗುರುಕುಲಗಳು, ಆಶ್ರಮಗಳು, ಶಾಲಾ ಮಕ್ಕಳಲ್ಲಿ ವನ್ಯಜೀವಿಗಳ ಬಗ್ಗೆ ಆಸಕ್ತಿ ಮೂಡಿಸಲು ಹಾಗೂ ವನ್ಯಜೀವಿಗಳನ್ನು ಸಂರಕ್ಷಿಸಲು ದುಡಿಯುವ ಸಂಸ್ಥೆಗಳು ಸೇರಿದಂತೆ 250ಕ್ಕೂ ಹೆಚ್ಚು ಮಳಿಗೆಗಳಲ್ಲಿ ಆಯ್ದ ಕೆಲವನ್ನಷ್ಟೇ ನಿಮ್ಮ ಮುಂದೆ ಪರಿಚಯಿಸಿದ್ದೇವೆ. ಈ ಸೇವಾಸಂಸ್ಥೆಗಳಿಗೆ ಧನ ಸಹಾಯ, ಸ್ವಯಂಸೇವಕರಾಗಿ ಭಾಗವಹಿಸುವ ಮೂಲಕ, ಜನಜಾಗೃತಿ_ಪ್ರಚಾರಗೊಳಿಸುವ ಕಾರ್ಯದಲ್ಲಿ ನಾವು ಜೋಡಿಸಿಕೊಳ್ಳಬಹುದು. ಜೀವನದ ಕೆಲ ಸಮಯವನ್ನು ಈ ಉತ್ತಮ ಕೆಲಸಗಳಲ್ಲಿ ವಿನಿಯೋಗಿಸಿ, ನಮ್ಮ ಪರಿಚಿತರಿಗೂ ಈ ಸಮಾಜಮುಖಿ ಕೆಲಸಗಳನ್ನು ಪರಿಚಯಿಸಿ ಜೋಡಿಸಿಕೊಂಡು ಸ್ವಸ್ಥ ಹಾಗೂ ಸದೃಢ ಸಮಾಜ ನಿರ್ಮಾಣದಲ್ಲಿ ನಮ್ಮ ಪಾಲಿನ ಕರ್ತವ್ಯ ನಿರ್ವಹಿಸೋಣ. ಹಿಂದೂ ಆಧ್ಯಾತ್ಮಿಕ ಮತ್ತು ಸೇವಾ ಮೇಳವು ಅಂತಹ ಆರೋಗ್ಯವಂತ ಸಮಾಜವನ್ನು ನಿರ್ಮಿಸುವ ಮಹದಾಸೆಯಿಂದಲೇ ಆರಂಭವಾದದ್ದು ಮತ್ತು ಮೇಳಕ್ಕೆ ಆಗಮಿಸಿದವರಲ್ಲಿಯೂ ಆ ಭಾವವನ್ನು ಮೂಡಿಸುವಲ್ಲಿ ಯಶಸ್ವಿಯಾಗಿದೆ.

**ನೆಲದ ಮಾತು**

## ನಳನಳಿಸುವ ಜವಾರಿ ನವಣೆ!

ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಬೆಟಸೂರು ಗ್ರಾಮ. ಸುತ್ತಮುತ್ತ ಬಿಟಿ ಹತ್ತಿ, ಮೆಕ್ಕೆಜೋಳ ಸೋತು ಸೊರಗಿವೆ. ಆದರೆ ಪ್ರವೀಣ ಅವರ 36 ಎಕರೆ ಹೊಲದಲ್ಲಿ ನವಣೆ ತಳಿಗಳು ನಳನಳಿಸುತ್ತಿವೆ. ಮಳೆ ಕೊರತೆ ಹಾಗೂ ವಾತಾವರಣದ ಏರುಪೇರನ್ನು ತಡೆದುಕೊಂಡು ಹುಲುಸಾಗಿ ಬೆಳೆದಿರುವ ಸಿರಿಧಾನ್ಯ, ಬರಗಾಲಕ್ಕೆ ಸವಾಲು ಹಾಕುತ್ತಿದೆ!

ಪ್ರವೀಣ, ಮೊದಲು ಹುರುಳಿ, ಗೋಧಿ, ಕೆಂಜೋಳ ಇತ್ಯಾದಿ ಬೆಳೆದು, ಸ್ವತಃ ಸಂಸ್ಕರಣೆ ಮಾಡಿ ಸೇವಿಸುತ್ತಿದ್ದರು. ಆದರೆ ಮಳೆ ಕೊರತೆಯಿಂದ ಕಳೆದ 2ವರ್ಷ ಸರಿಯಾಗಿ ಬೆಳೆ ತೆಗೆದಿರಲಿಲ್ಲ. ಈ ವರ್ಷ ಕೂಡ ಅದೇ ದುಃಸ್ಥಿತಿ. ಇಂಥ ಸಮಯದಲ್ಲಿ ಪ್ರವೀಣ ಅವರ ಮನಸ್ಸು ಸಿರಿಧಾನ್ಯದ ಕಡೆಗೆ ಹರಿಯಿತು.



ಪ್ರವೀಣ, 'ಸಹಜ ಸಮೃದ್ಧ' ಎಂಬ ಬಳಗದ ರೈತರ ಮೂಲಕ ಹದಿಮೂರು ತಳಿ ಜವಾರಿ ನವಣೆಯನ್ನು ಪಡೆದು ಬಿತ್ತಿದರು. ನವಣೆ ಬೇಸಾಯಕ್ಕೆ ಬೇಕಾಗುವುದು ಅತ್ಯಲ್ಪ ವೆಚ್ಚ. ಅವರು ಬಿತ್ತನೆ ಮಾಡುವಾಗ 2 ಕ್ವಿಂಟಲ್ ಎರೆಗೊಬ್ಬರ ಕೊಟ್ಟಿದ್ದರು. ಮತ್ತೇನೂ ಒಳಸುರಿ ಇಲ್ಲ. ಒಂದು ತಳಿಗೆ ಸುಳಿರೋಗದ ಲಕ್ಷಣ ಕಾಣಿಸಿದಾಗ ಹುಳಿಮಜ್ಜಿಗೆ ಸಿಂಪಡಿಸಿದ ಕೂಡಲೇ ನಿಯಂತ್ರಣಕ್ಕೆ ಬಂದಿತಂತೆ. ಕಳೆಯನ್ನು ಒಂದೇ ಸಲ ತೆಗೆಯಲಾಗಿದೆ. ಸಕಾಲಕ್ಕೆ ಮಳೆ ಬಾರದಿದ್ದರೂ ಸಮಸ್ಯೆಯಾಗಿಲ್ಲ. ಆಧುನಿಕ ಕೃಷಿ ವಿಜ್ಞಾನದಿಂದ ತೃಣ ಧಾನ್ಯ ಎಂಬ ಹಣೆಪಟ್ಟಿ ಕಟ್ಟಿಸಿಕೊಂಡಿದ್ದ ಈ ಸಿರಿಧಾನ್ಯಗಳೇ ಇಂದು ಹವಾಮಾನ ವೈಪರೀತ್ಯದ ಸಂಕಟದ ವೇಳೆ ರೈತರ ಕೈಹಿಡಿಯುತ್ತಿರುವುದು.

ನವಣೆಯ ತಳಿಗಳಲ್ಲಿ ಪಿಷ್ಟ ಮತ್ತು ನಾರಿನಂಶ ಹೇರಳವಾಗಿದೆ. ಹೀಗಾಗಿ ಮಧುಮೇಹಿ ರೋಗಿಗಳಿಗೆ ಇದೊಂದು ಪಕ್ವ ಆಹಾರ. ದೇಹದಲ್ಲಿನ ಕೊಲೆಸ್ಟರಾಲ್ ತಗ್ಗಿಸಲು, ರಕ್ತದೊತ್ತಡ ನಿಯಂತ್ರಣಕ್ಕೆ ನವಣೆ ನೆರವಾಗುತ್ತದೆ. ಇದರ ಸೇವನೆ ದೇಹವನ್ನು ಸದೃಢ ಹಾಗೂ ರೋಗನಿರೋಧಕವಾಗಿಸುತ್ತದೆ. ಹಲವಾರು ಪ್ರಯೋಜನಗಳ ಈ ಧಾನ್ಯದ ಹದಿಮೂರು ತಳಿಗಳನ್ನು ಸಂರಕ್ಷಿಸಿ, ರೈತರಿಗೆ ಬಿತ್ತನೆ ಬೀಜ ಕೊಡಲು ಪ್ರವೀಣ ನಿರ್ಧರಿಸಿದ್ದಾರೆ. ಮುಂದೆ ಇನ್ನಷ್ಟು ಹೆಚ್ಚು ಪ್ರದೇಶದಲ್ಲಿ ನವಣೆ ಬಿತ್ತನೆ ಮಾಡುವ ಉದ್ದೇಶ ಅವರದು.

ಕಣ್ಮರೆಯ ಅಂಚಿನಲ್ಲಿದ್ದ ಕರಿನವಣೆ (ಒಂದು ಅಡಿ ಉದ್ದದ ತೆನೆ), ಜಾನುವಾರುಗಳಿಗೆ ಹೆಚ್ಚು ಮೇವು ಕೊಡಬಲ್ಲ ಚಂದ್ರನವಣೆ (6 ಅಡಿ ಎತ್ತರ), ಮುಳ್ಳು, ಕೆಂಪು, ಬಿಳಿಹುಲ್ಲು, ಕೆಂಪುಹುಲ್ಲು, ಸಣ್ಣ, ಜಡೆ, ದೊಡ್ಡತಲೆ, ಹಾಲುಹುಲ್ಲು, ಹಾವೇರಿ ಹಾಗೂ ತಮಿಳುನಾಡಿನ ತೆನ್ನೈ ನವಣೆ ಇವರ ಹೊಲದಲ್ಲಿ ಅರಳಿವೆ. ನಗರ-ಪಟ್ಟಣಗಳಲ್ಲಿ ಸಿರಿಧಾನ್ಯದ ಮಾರುಕಟ್ಟೆ ವಿಶಾಲವಾಗುತ್ತಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡ ರೈತರು ನವಣೆ ಬೆಳೆಗೆ ಮುಂದಾಗಬೇಕು ಎನ್ನುತ್ತಾರೆ ಪ್ರವೀಣ. ವಿವರಗಳಿಗೆ: 8971013086.

ಸಂಪಾದಕೀಯ ಸಹಕಾರ ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಶ್ರೀಹರ್ಷ ಪೆರ್ಲ, ಪ್ರತಾಪ ಕೊಡಂಚ, ಶ್ರೀವತ್ಸ, ರಾಜೇಶ್ ಪದ್ಮಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

ದೇಶದ ಶೇ. 90ರಷ್ಟು ಕಸವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡುವ ದೇಶ ಎಂಬ ಖ್ಯಾತಿ ಸ್ವೀಡನ್ ದೇಶಕ್ಕಿದೆ. ಸ್ವೀಡನ್ ದೇಶದಲ್ಲಿರುವ ಕಸ ಸಂಸ್ಕರಣಾ ಘಟಕಗಳು ವಿಶ್ವದ ಅತ್ಯುತ್ತಮ ವ್ಯವಸ್ಥೆಗಳನ್ನು ಹೊಂದಿದೆ ಹಾಗೂ ಅತಿ ಹೆಚ್ಚು ಕಸವನ್ನು ಸಂಸ್ಕರಿಸಿ ಅಲ್ಲಿನ ಪರ್ಯಾಯ ಇಂಧನ ವ್ಯವಸ್ಥೆಯನ್ನು ಬಲವರ್ಧಿಸುತ್ತಿವೆ. ಇದೀಗ ಅಲ್ಲಿನ ಘಟಕಗಳು, ಕಸ ದುರ್ಲಭವಾಗುತ್ತಿರುವುದರಿಂದ ಹೊರದೇಶಗಳ ಕಸವನ್ನು ಆಮದು ಮಾಡಿಕೊಳ್ಳುವ ಚಿಂತನೆ ನಡೆಸಿವೆ. ತ್ಯಾಜ್ಯದ ಸೂಕ್ತ ರೀತಿಯಲ್ಲಿ ವಿಲೇವಾರಿಯಾಗದೇ ಕೆರೆಗಳು, ಗ್ರಾಮಗಳು, ರಸ್ತೆಗಳಲ್ಲಿ ವ್ಯರ್ಥವಾಗಿ ಬಿದ್ದು ಆರೋಗ್ಯವನ್ನು ಹದಗೆಡಿಸುತ್ತಿರುವ ನಮ್ಮ ದೇಶದಲ್ಲಿಯೂ ಈ ಉತ್ತಮ ದರ್ಜೆಯ ವ್ಯವಸ್ಥೆಯ ಅಗತ್ಯತೆ ಎದ್ದು ಕಾಣುತ್ತದೆ.



**ನೇಹಾ ಬಗರಿಯಾ ಮೂಲತಃ ಮುಂಬೈನವರು. ಬೆಂಗಳೂರಿಗೆ ವಲಸೆ ಬಂದು ಮಹಿಳೆಯರಿಗೆ ಉದ್ಯೋಗ ಕೊಡಿಸುವ ಮತ್ತು ಔದ್ಯೋಗಿಕ ಕೌಶಲದ ಬಗ್ಗೆ ತರಬೇತಿ ನೀಡುವಂತಹ ಸ್ಟಾರ್ಟ್‌ಅಪ್ ಸ್ಥಾಪಿಸಿದ್ದಾರೆ. ನೇಹಾ ತೆರೆದಿರುವ 'ಜಾಬ್ ಫಾರ್ ಹರ್' ಕಂಪೆನಿಯ ಮುಖಾಂತರ ಈವರೆಗೆ ಸಾವಿರಕ್ಕೂ ಹೆಚ್ಚು ಮಹಿಳೆಯರು ಉದ್ಯೋಗಾವಕಾಶ ಪಡೆದುಕೊಂಡಿದ್ದಾರೆ. ನೇಹಾ, ಮಾರ್ಕೆಟಿಂಗ್ ವಿಷಯದಲ್ಲಿ ಪದವಿ ಪಡೆದಿದ್ದಾರೆ. ಪದವಿ ಬಳಿಕ ಕೆಲವು ಖಾಸಗಿ ಕಂಪೆನಿಗಳಲ್ಲಿ ಕೆಲಸ ಮಾಡಿದ್ದರು. ಮದುವೆಯ ನಂತರ ನೇಹಾ ಬೆಂಗಳೂರಿಗೆ ವಲಸೆ ಬಂದರು. ಅವರ ಪತಿ ಬೆಂಗಳೂರಿನಲ್ಲಿ ಕಂಪೆನಿಯನ್ನು ನಡೆಸುತ್ತಿದ್ದು, ಅದರಲ್ಲೂ ಕೆಲವು ತಿಂಗಳು ಕೆಲಸ ಮಾಡಿದರು. ಗರ್ಭಿಣಿಯಾದ್ದರಿಂದ ನೇಹಾ ಕೆಲಸ ಬಿಟ್ಟು ಮನೆ ಸೇರಬೇಕಾಯಿತು. ಮಕ್ಕಳ ಲಾಲನೆ ಪಾಲನೆ ಮಾಡುತ್ತ ಮನೆಯಲ್ಲಿ ಸಮಯ ಕಳೆಯುವುದು ಅವರಿಗೆ ಬೋರ್ ಹೊಡೆಯತೊಡಗಿತ್ತು. ಈ ವೇಳೆ ಕೆಲಸಕ್ಕಾಗಿ ಹುಡುಕಿದರೂ ನೇಹಾಗೆ ಹೊಂದಿಕೆಯಾಗುವಂತಹ ಕೆಲಸ ಸಿಗಲಿಲ್ಲ! ಮಹಿಳೆಯರಿಗಾಗಿ ಉದ್ಯೋಗದ ಬಗ್ಗೆ ಮಾಹಿತಿ ನೀಡುವ ಯಾವುದೇ ಕಂಪೆನಿಗಳು ಇರಲಿಲ್ಲ! ಜತೆಗೆ ಸಾಕಷ್ಟು ಮಹಿಳೆಯರು ಇದೇ ಸಮಸ್ಯೆಯನ್ನೇ ಎದುರಿಸುತ್ತಿರುವುದು ಅವರ ಗಮನಕ್ಕೆ ಬಂತು! ಇದನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ಮಹಿಳೆಯರಿಗಾಗಿ ಉದ್ಯೋಗದ ಮಾಹಿತಿ ನೀಡುವ 'ಜಾಬ್ ಫಾರ್ ಹರ್' ಎಂಬ ಸ್ಟಾರ್ಟ್‌ಅಪ್ ಆರಂಭಿಸುವ ಮೂಲಕ ಹೊಸ ಬದುಕಿಗೆ ಮುನ್ನುಡಿ ಬರೆದರು. ಇದೀಗ ಬಹುರಾಷ್ಟ್ರೀಯ ಮತ್ತು ಕಾರ್ಪೊರೇಟ್ ಕಂಪೆನಿಗಳು ಸೇರಿದಂತೆ ಹಲವಾರು ಸಂಸ್ಥೆಗಳಲ್ಲಿ ಸಾವಿರಕ್ಕೂ ಹೆಚ್ಚು ಮಹಿಳೆಯರಿಗೆ ಉದ್ಯೋಗ ಕೊಡಿಸಿದ್ದಾರೆ. ಜತೆಗೆ ತಮ್ಮ ಕಂಪೆನಿಯಲ್ಲಿ 30ಕ್ಕೂ ಹೆಚ್ಚು ಜನರಿಗೆ ಕೆಲಸ ಕೊಟ್ಟಿದ್ದಾರೆ. ಕಚೇರಿಗಳಿಗೆ ಮಹಿಳೆಯರ ಅಲೆದಾಟವನ್ನು ತಪ್ಪಿಸಿ ಅವರ ಬೆರಳ ತುದಿಯಲ್ಲೇ ಉದ್ಯೋಗದ ಮಾಹಿತಿ ನೀಡುವುದು 'ಜಾಬ್ ಫಾರ್ ಹರ್' ಕಂಪೆನಿಯ ಮುಖ್ಯ ಕೆಲಸ. ಜತೆಗೆ ಉದ್ಯೋಗಕ್ಕಾಗಿ ಯಾವ ರೀತಿ ತಯಾರಿ ಮಾಡಿಕೊಳ್ಳಬೇಕು, ಉದ್ಯೋಗದ ಕೌಶಲಗಳು, ಸಂದರ್ಶನವನ್ನು ಎದುರಿಸುವ ಬಗೆಗಳ ಕುರಿತು ತರಬೇತಿ ನೀಡುತ್ತಿದ್ದಾರೆ. ಮಹಿಳೆಯರಿಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಅನುಕೂಲ ಮಾಡಿಕೊಡುವುದೇ ನಮ್ಮ ಕಂಪೆನಿ ಉದ್ದೇಶ ಎನ್ನುತ್ತಾರೆ ನೇಹಾ.**

**www.jobsforher.com**

ವೈದ್ಯಕೀಯ (ಎಂಬಿಬಿಎಸ್) ಮತ್ತು ದಂತವೈದ್ಯಕೀಯ (ಬಿಡಿಎಸ್) ಪದವಿ ಕೋರ್ಸ್‌ಗಳ ಪ್ರವೇಶಾತಿಗಾಗಿ ಕೇಂದ್ರ ಸರ್ಕಾರ ನಡೆಸುವ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ಎನ್‌ಇಇಟಿ–ನೀಟ್) ಮುಂದಿನ ವರ್ಷದಿಂದ ಆರು ಪ್ರಾದೇಶಿಕ ಭಾಷೆಗಳಲ್ಲೂ ನಡೆಯಲಿದೆ. ಇಂಗ್ಲಿಷ್ ಮತ್ತು ಹಿಂದಿ ಭಾಷೆ ಹೊರತಾಗಿ ತಮಿಳು, ತೆಲುಗು, ಮರಾಠಿ, ಗುಜರಾತಿ, ಅಸ್ಸಾಮಿ ಮತ್ತು ಬಂಗಾಳಿ ಭಾಷೆಗಳಲ್ಲಿ ಎನ್‌ಇಇಟಿ ನಡೆಯಲಿದೆ ಎಂದು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದರು. ಸಿಬಿಎಸ್‌ಇಯ ಮನವಿ ಮೇರೆಗೆ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳು ಸೇರಿದಂತೆ ಉನ್ನತ ಶೈಕ್ಷಣಿಕ ಸಂಸ್ಥೆಗಳಿಗೆ ಪ್ರವೇಶ ಪರೀಕ್ಷೆಗಳನ್ನು ನಡೆಸುವುದಕ್ಕಾಗಿ ಪ್ರತ್ಯೇಕ ರಾಷ್ಟ್ರೀಯ ಸಂಸ್ಥೆಯನ್ನು ಸ್ಥಾಪಿಸುವ ಕುರಿತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ ಚಿಂತನೆ ನಡೆಸಿದೆ.

**ಭಾರತ ವಿಶ್ವದ 5ನೇ ಅತಿದೊಡ್ಡ ಆರ್ಥಿಕತೆ ಎಂದು ಅಮೆರಿಕದ ಫೋರ್ಬ್ಸ್ ಮ್ಯಾಗಜೀನ್ ತಿಳಿಸಿದೆ. ಫೋರ್ಬ್ಸ್ ಮ್ಯಾಗಜಿನ್‌ನ ವರದಿ ಪ್ರಕಾರ 2016ರಲ್ಲಿ ಭಾರತದ ಜಿಡಿಪಿ 2.30 ಲಕ್ಷ ಕೋಟಿ ಡಾಲರ್ ಇದ್ದು, ವಿಶ್ವದ ಅತಿದೊಡ್ಡ ಆರ್ಥಿಕತೆ ಹೊಂದಿರುವ ರಾಷ್ಟ್ರಗಳ ಪೈಕಿ 5ನೇ ಸ್ಥಾನದಲ್ಲಿದೆ. ಮೊದಲ 5 ಸ್ಥಾನಗಳಲ್ಲಿ ಕ್ರಮವಾಗಿ ಅಮೆರಿಕ, ಚೀನಾ, ಜಪಾನ್ ಮತ್ತು ಜರ್ಮನಿ ದೇಶಗಳಿವೆ. ಇದೇ ವೇಳೆ ಭಾರತವು, ಈಸ್ಟ್ ಇಂಡಿಯಾ ಕಂಪೆನಿ ಮೂಲಕ 100 ವರ್ಷ ಆಳಿದ್ದ ಬ್ರಿಟನ್ ದೇಶವನ್ನೇ ಹಿಂದೆ ಸರಿಸಿದೆ! ಬ್ರಿಟನ್‌ನ ಜಿಡಿಪಿ 2.29ಲಕ್ಷ ಕೋಟಿ ಡಾಲರ್. 2011ರಲ್ಲಿ 'ಸೆಂಟರ್ ಫಾರ್ ಎಕನಾಮಿಕ್ಸ್ ಆ್ಯಂಡ್ ಬ್ಯುಸಿನೆಸ್ ರಿಸರ್ಚ್'ನ ಚಿಂತಕರ ಚಾವಡಿಯೊಂದು, 2020ರ ವೇಳೆಗೆ ಭಾರತ ವಿಶ್ವದ 5ನೇ ಅತಿದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಲಿದೆ ಎಂದು ವಿಶ್ಲೇಷಿಸಿತ್ತು.**

## ಸಾಲುದ್ದದ ಸುದ್ದಿಗಳು



ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಎರಡೂ ಬದಿಗಳಲ್ಲಿ 500 ಮೀಟರ್ ವ್ಯಾಪ್ತಿಯೊಳಗಿನ ಎಲ್ಲ ಮದ್ಯದಂಗಡಿಗಳನ್ನು ಮುಚ್ಚುವಂತೆ ಸುಪ್ರೀಂ ಕೋರ್ಟ್ ಆದೇಶಿಸಿದೆ. ಈಗಾಗಲೇ ಇರುವ ಮದ್ಯದಂಗಡಿಗಳ ಪರವಾನಗಿಗಳನ್ನು ಮುಂದಿನ ಮಾರ್ಚ್ 31ರ ನಂತರ ನವೀಕರಿಸಬಾರದು ಎಂದೂ ಕೋರ್ಟ್ ಕಟ್ಟುನಿಟ್ಟಾಗಿ ಹೇಳಿದೆ. ನಮ್ಮ ರಾಜ್ಯದಲ್ಲಿಯೇ ಹೆದ್ದಾರಿಯ ಇಕ್ಕೆಲಗಳ 220ಮೀ. ವ್ಯಾಪ್ತಿಯಲ್ಲಿ 280 ಮದ್ಯದಂಗಡಿಗಳಿವೆ. 500 ಮೀ. ವ್ಯಾಪ್ತಿ ಪರಿಗಣಿಸಿದರೆ ಸಂಖ್ಯೆ ಇನ್ನೂ ಹೆಚ್ಚುತ್ತದೆ. ಬಹಳಷ್ಟು ತಾಲ್ಲೂಕು ಕೇಂದ್ರಗಳ, ಹೋಬಳಿ ಮುಖ್ಯ ಕೇಂದ್ರಗಳ ಮಧ್ಯದಲ್ಲಿಯೇ ಒಂದಲ್ಲ ಒಂದು ಹೆದ್ದಾರಿ ಹಾದು ಹೋಗುತ್ತದೆ. 500 ಮೀ. ಷರತ್ತನ್ನು ಅನ್ವಯಿಸಲು ಹೋದರೆ ಅಲ್ಲಿ ಒಂದೇ ಒಂದು ಮದ್ಯದ ಅಂಗಡಿಗೂ ಪರವಾನಗಿ ಕೊಡುವಂತಿಲ್ಲ. ಆದರೆ ಬೊಕ್ಕಸಕ್ಕೆ ವರಮಾನ ತಂದುಕೊಡುವ ಪ್ರಮುಖ ಮೂಲ ಎಂಬ ಕಾರಣಕ್ಕಾಗಿ ಮದ್ಯದ ಅಂಗಡಿಗಳಿಗೆ ಉದಾರವಾಗಿ ರಾಜ್ಯ ಸರ್ಕಾರಗಳು ಪರವಾನಗಿ ನೀಡುತ್ತಿರುವುದು ಇದೀಗ ಸುಪ್ರೀಂನ ಕೆಂಗಣ್ಣಿಗೆ ಗುರಿಯಾಗಿದೆ.



**ಭಾರತೀಯ ಸಂವಿಧಾನಕ್ಕಿಂತ ಯಾವುದೇ ವೈಯಕ್ತಿಕ ಕಾನೂನು ದೊಡ್ಡದಲ್ಲ, ತ್ರಿವಳಿ ತಲಾಕ್ ಅಸಾಂವಿಧಾನಿಕವಾಗಿದ್ದು, ಮುಸ್ಲಿಂ ಮಹಿಳೆಯರಿಗೆ ಮಾರಕವಾಗಿದೆ ಎಂದು ಅಲಹಬಾದ್ ಹೈ ಕೋರ್ಟ್ ತ್ರಿವಳಿ ತಲಾಕ್ ಪದ್ಧತಿ ವಿರುದ್ಧ ಕಿಡಿಕಾರಿದೆ. ಉತ್ತರಪ್ರದೇಶದ ಬುಲಂದಶಹರ್ ಪ್ರದೇಶದ ಹೀನಾ ಮತ್ತು ಉಮರ್‌ಬಿ ಎಂಬ ಇಬ್ಬರು ಮಹಿಳೆಯರು ತ್ರಿವಳಿ ತಲಾಕ್ ವಿರುದ್ಧ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯ ಈ ಮಹತ್ವದ ತೀರ್ಪು ನೀಡಿದೆ. ಮುಸಲ್ಮಾನರ ಪವಿತ್ರ ಗ್ರಂಥ ಕುರಾನಿನಲ್ಲೂ ತ್ರಿವಳಿ ತಲಾಕ್ ಪದ್ಧತಿ ಬಗ್ಗೆ ಎಲ್ಲಿಯೂ ತಿಳಿಸಿಲ್ಲ. ಮುಸ್ಲಿಂ ಕಾಯ್ದೆಯನ್ನು ತಪ್ಪಾಗಿ ಬಳಸಿಕೊಳ್ಳಲಾಗುತ್ತಿದೆ. ಈ ಪದ್ಧತಿಯಿಂದ ಇಸ್ಲಾಂ ಮಹಿಳೆಯರಿಗೆ ತೀವ್ರ ಅನ್ಯಾಯವಾಗುತ್ತಿದೆ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.**



## ಮತ್ತೆ ವೈಭವದತ್ತ ಭಾರತದ ಹಾಕಿ ದಾಪುಗಾಲು

ಭಾರತದ ಹಾಕಿಯಲ್ಲಿ ಮತ್ತೆ ಒಳ್ಳೆಯ ದಿನಗಳು ಬರುತ್ತಿವೆ. ಈಚೆಗೆ ನಡೆದ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಗೂ ವಿಶ್ವಕಪ್ ಜೂನಿಯರ್ ಪುರುಷರ ಹಾಕಿಯಲ್ಲಿ ಭಾರತ ಪ್ರಶಸ್ತಿ ಗೆದ್ದಿದೆ. ಈ ಮೂಲಕ ಹಾಕಿಯಲ್ಲಿ ಮಸುಕಾಗಿದ್ದ ದೇಶದ ಘನತೆ ಮತ್ತೆ ಹೊಳೆಯತೊಡಗಿದೆ. 8ವರ್ಷಗಳ ಹಿಂದೆ ಬೀಜಿಂಗ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ವಿಫಲವಾಗಿದ್ದ ಭಾರತ, ನಾಲ್ಕು ವರ್ಷಗಳ ಹಿಂದೆ ಲಂಡನ್ ಒಲಿಂಪಿಕ್ಸ್‌ನಲ್ಲಿ ಕೊನೆಯ (12ನೇ) ಸ್ಥಾನಕ್ಕಿಳಿದಿತ್ತು. ಇತ್ತೀಚೆಗೆ ನಡೆದ ರಿಯೊ ಒಲಿಂಪಿಕ್ಸ್‌ನಲ್ಲಿ ಎಂಟರ ಘಟ್ಟಕ್ಕೆ ಏರಿದ್ದ ಭಾರತ, ಹಾಕಿ ಜಗತ್ತಿನ ಆರು ಅಗ್ರಮಾನ್ಯ ತಂಡಗಳಿರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ಮೊದಲ ಬಾರಿಗೆ ಫೈನಲ್ ತಲುಪಿದೆ. ಈ ವರ್ಷ ಭಾರತ ವಿವಿಧ ಟೂರ್ನಿಗಳಲ್ಲಿ ಹಾಕಿಯ ಪ್ರಬಲಶಕ್ತಿಯಾದ ಆಸ್ಟ್ರೇಲಿಯಾ, ನೆದರ್‌ಲೆಂಡ್ಸ್, ಜರ್ಮನಿ, ಅರ್ಜೆಂಟಿನಾ ತಂಡಗಳನ್ನು ಮಣಿಸಿದೆ. ಇದು ಭಾರತದಲ್ಲಿ ಹಾಕಿ ಮತ್ತೆ ಯಶಸ್ಸಿನ ಹೊಸ ದಿಕ್ಕುಗಳತ್ತ ಹೆಜ್ಜೆಗಳನ್ನಿಡತೊಡಗಿರುವುದರ ಸಂಕೇತ. ಇದೀಗ ಏಷ್ಯನ್ ಚಾಂಪಿಯನ್ಸ್ ಟ್ರೋಫಿಯನ್ನು ಭಾರತ ಗೆದ್ದಿದೆ. ಕಿರಿಯರೂ ಇಂಗ್ಲೆಂಡ್, ಕೆನಡಾ, ದಕ್ಷಿಣ ಆಫ್ರಿಕಾ, ಬೆಲ್ಜಿಯಂನಂತಹ ಘಟಾನುಘಟಿ ತಂಡಗಳನ್ನೇ ಮಣಿಸಿ ವಿಶ್ವಕಪ್ ಗೆದ್ದಿದ್ದಾರೆ.

ವಾತಾವರಣದಲ್ಲಿ ಹೆಚ್ಚುತ್ತಿರುವ ಇಂಗಾಲದ ಡೈ ಆಕ್ಸೈಡ್‌ನ ಅಂಶ ಮನುಕುಲಕ್ಕೆ ಶಾಪವಾಗಿ ಪರಿಣಮಿಸಿದೆ. ಇದು ವಾಯುಮಾಲಿನ್ಯದ ಜೊತೆಗೆ ಹಲವು ಸಮಸ್ಯೆಗಳಿಗೆ ಕಾರಣವಾಗಿದೆ. ಈ ಮಧ್ಯೆ



ವಿಜ್ಞಾನಿಗಳು ಪರಿಸರದ ಸಮತೋಲನ ಕಾಯ್ದುಕೊಳ್ಳಲು ಸಹಾಯವಾಗಬಲ್ಲ ಹೊಸ ಅನ್ವೇಷಣೆ ಮಾಡಿದ್ದಾರೆ. ಅಮೆರಿಕದ ಟೆನ್ನೆಸ್‌ನ 'ಓಕ್ ರಿಡ್ಜ್ ನ್ಯಾಷನಲ್ ಲ್ಯಾಬೋರಿಟರಿ'ಯ ವಿಜ್ಞಾನಿಗಳು ಕೆಮಿಕಲ್ ರಿಯಾಕ್ಷನ್ ಮೂಲಕ ಕಾರ್ಬನ್ ಡೈ ಆಕ್ಸೈಡ್‌ನ್ನು ಎಥಾನಲ್ ಆಗಿ ಪರಿವರ್ತಿಸುವ ಬಗ್ಗೆ ಅನ್ವೇಷಣೆ ಮಾಡಿದ್ದಾರೆ. ವಿಜ್ಞಾನಿಗಳು ಎಲೆಕ್ಟ್ರೋ ಕೆಮಿಕಲ್ ಪ್ರೊಸೆಸ್ ಮೂಲಕ ಕಾರ್ಬನ್ ಮತ್ತು ಕಾಪರ್ ಕಣಗಳನ್ನು ಪ್ರಯೋಗಕ್ಕೆ ಒಳಪಡಿಸಿ, ಗ್ರೀನ್ ಹೌಸ್ ಗ್ಯಾಸ್‌ನ್ನು ಉಪಯುಕ್ತ ಇಂಧನವಾಗಿ ಪರಿವರ್ತಿಸಿದ್ದಾರೆ. ವಿಜ್ಞಾನಿಗಳ ಈ ವಿನೂತನ ಅನ್ವೇಷಣೆ ವೈಜ್ಞಾನಿಕ ಲೋಕದಲ್ಲಿ ಹೊಸ ಆಶಯವನ್ನು ಹುಟ್ಟಿಸಿದೆ.

**ನೋಟು ನಿಷೇಧ ಕ್ರಮಕ್ಕೆ ಸಂಬಂಧಿಸಿ ವಿಪಕ್ಷಗಳ ನಡವಳಿಕೆ ಆಕ್ಷೇಪಾರ್ಹ ಎಂದಿರುವ ಪ್ರಧಾನಿ ನರೇಂದ್ರ ಮೋದಿ, ನಿರಂಜನ್ ನಾಥ್ ವಾಂಚೋ ಸಮಿತಿ ನೀಡಿದ್ದ ನೋಟು ನಿಷೇಧ ಪ್ರಸ್ತಾವನೆಯನ್ನು ಇಂದಿರಾ ಗಾಂಧಿ ನಿರಾಕರಿಸಿದ್ದರು. ಅಂದಿನಿಂದಲೂ ಕಾಂಗ್ರೆಸ್ ನೋಟು ರದ್ದಿಗೆ ಆಕ್ಷೇಪಿಸುತ್ತಾ, ಪರೋಕ್ಷವಾಗಿ ಭ್ರಷ್ಟಾಚಾರವನ್ನು ಬೆಂಬಲಿಸುತ್ತಾ ಬಂದಿದೆ. ಇಂದಿರಾ ಗಾಂಧಿಯವರನ್ನು ನೋಟು ನಿಷೇಧಕ್ಕೆ ಸಂಬಂಧಿಸಿ ವೈ.ಬಿ. ಚವಾಣ್ ಪ್ರಶ್ನಿಸಿದ್ದಕ್ಕೆ, ನಿಮಗೆ ಮುಂದಿನ ಚುನಾವಣೆ ಎದುರಿಸಬೇಕೆಂದಿಲ್ಲವೇ? ಎಂಬ ಮಾತೊಂದನ್ನು ಪ್ರಸ್ತಾಪಿಸಿ ವಿಪಕ್ಷ ಕಾಂಗ್ರೆಸ್‌ನ ನಡೆಯನ್ನು ತರಾಟೆಗೆ ತೆಗೆದುಕೊಂಡರು.**

## ಸೆಲೆಬ್ರಿಟಿಗಳಲ್ಲ ಸದ್ದಿಲ್ಲದ ಸಾಧಕರು




**ಛತ್ತೀಸ್‌ಗಢದ ಗುಡ್ಡುಗಾಡಿನ ಪ್ರದೇಶದಲ್ಲಿ ಮೂಲಸೌಕರ್ಯಗಳ ಕೊರತೆ ಇಂದಿಗೂ ಕಾಡುತ್ತಿದೆ, ಆರೋಗ್ಯ ಸೇವೆಗೂ ತತ್ವಾರ. ಇದರಿಂದ ಹೆಚ್ಚು ತೊಂದರೆ ಅನುಭವಿಸುತ್ತಿರುವವರು ಮಹಿಳೆಯರು ಮತ್ತು ಮಕ್ಕಳು. ಗರ್ಭಿಣಿಯರ ಕಷ್ಟವಂತೂ ಹೇಳತೀರದು. ಆದರೆ ಅಜಯ್ ತ್ರಾಕೆರೊ ಎಂಬ ಉತ್ಸಾಹಿ ಯುವಕನ ಪ್ರಯತ್ನಗಳಿಂದ ನಾರಾಯಣಪುರದಲ್ಲಿ ಬದಲಾವಣೆಯ ಗಾಳಿ ಬೀಸಿದೆ.**

**ವಿಶಿಷ್ಟ ತಂತ್ರಜ್ಞಾನವನ್ನು ಬಳಸಿ ಅಜಯ್ ಬೈಕ್ ಆಂಬ್ಯುಲೆನ್ಸ್ ಒಂದನ್ನು ನಿರ್ಮಿಸಿದ್ದಾರೆ. ಮುಂದೆ ಆಂಬ್ಯುಲೆನ್ಸ್ ಚಾಲಕ ಅಜಯ್ ಕುಳಿತುಕೊಳ್ಳುತ್ತಾರೆ. ಪಕ್ಕದಲ್ಲಿ ಗರ್ಭಿಣಿಯರನ್ನು ಕೂರಿಸಿಕೊಂಡು ಹೋಗಲು ಚಿಕ್ಕ ಜಾಗ ಮಾಡಲಾಗಿದೆ. ಸುತ್ತಲೂ ಬಟ್ಟೆಯಿಂದ ಮುಚ್ಚಿ ಗೂಡಿನಂತೆ ನಿರ್ಮಿಸಲಾಗಿದೆ. ಈ ಬೈಕ್ ಆಂಬ್ಯುಲೆನ್ಸ್ ತುರ್ತು ಸಂದರ್ಭಗಳಲ್ಲಿ ಸೈರನ್ ಮೊಳಗಿಸುತ್ತ ಮುಂದೆ ಸಾಗುತ್ತದೆ. ಅವಘಡದ ಸಂದರ್ಭಗಳಲ್ಲಿ ಗ್ರಾಮಸ್ಥರಿಗೆ ನೆರವಾಗಲು ಪ್ರಥಮ ಚಿಕಿತ್ಸೆ ಕಿಟ್ ಕೂಡ ಇದರಲ್ಲಿದೆ. ಇಲ್ಲಿನ ಕಡಿದಾದ, ಅಪಾಯಕಾರಿ ರಸ್ತೆಗಳಲ್ಲಿ ಅಜಯ್ ತಮ್ಮ ಚಾಲನಾ ಕೌಶಲವನ್ನು ಪಣಕ್ಕಿಟ್ಟು ಗರ್ಭಿಣಿಯರನ್ನು ಆಸ್ಪತ್ರೆಗೆ ತಲುಪಿಸುತ್ತಾರೆ. ಅಜಯ್ ತನ್ನ ಸ್ವಪ್ರಯತ್ನದಿಂದ ಈವರೆಗ ಸುಮಾರು 200ಕ್ಕೂ ಹೆಚ್ಚು ಗರ್ಭಿಣಿಯರ ಜೀವ ಉಳಿಸಿ ಸಮಾಜಕ್ಕೆ ಮಾದರಿಯಾಗಿದ್ದಾರೆ.**

पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST
WITHOUT PREPAYMENT-WPP46 AT BENGALURU PSO, BG-560 026
on 10/25 of every Month REG.NO.CPMG/KA/BGS/102/2015-17
1-1-2017



## ರಾಜ್ಯಾದ್ಯಂತ ಜ. 12 ರಿಂದ 26ರ ವರೆಗೆ

# 'ವಿವೇಕ್‌ಬ್ಯಾಂಡ್–2017' ಅಭಿಯಾನ

ಸ್ವಾಮಿ ವಿವೇಕಾನಂದರ ಸ್ವಾಮಿ ವಿವೇಕಾನಂದರ ಜೀವನ ಸಂದೇಶವನ್ನು ಸಾರುವ ಬೃಹತ್ ಯುವ ಅಭಿಯಾನ 'ವಿವೇಕ್ ಬ್ಯಾಂಡ್–2017' ಜನವರಿ 12 ರಿಂದ 26ರವರೆಗೆ ರಾಜ್ಯಾದ್ಯಂತ ನಡೆಯಲಿದೆ.

'ರಾಷ್ಟ್ರೀಯ ಯುವ ದಿನ' ಎಂದು ಆಚರಿಸಲ್ಪಡುವ ಸ್ವಾಮಿ ವಿವೇಕಾನಂದರ ಜನ್ಮದಿನವಾದ ಜನವರಿ 12 ರಂದು ಯುವಕ–ಯುವತಿಯರು ತಮ್ಮ ಬಲಗೈಗೆ ವಿವೇಕ್ ಬ್ಯಾಂಡ್ ಧರಿಸಲಿದ್ದು, ವಿವೇಕಾನಂದರು ಯುವಜನರಿಗೆ ನೀಡಿದ 'ಉತ್ತಮನಾಗು–ಉಪಕಾರಿಯಾಗು' (Be good - Do good) ಎಂಬ ಸಂದೇಶವನ್ನು ತಾವು ಪಾಲನೆ ಮಾಡುವ (ಜ. 26ರೊಳಗೆ ವೈಯಕ್ತಿಕ ನೆಲೆಯಲ್ಲಿ ಅಥವಾ ಸಾಮೂಹಿಕ ನೆಲೆಯಲ್ಲಿ ಒಂದು ಉತ್ತಮ ಕೆಲಸವನ್ನು ಮಾಡುವ) ಸಂಕಲ್ಪ ತೊಡಲಿದ್ದಾರೆ.




### ವಿವೇಕ ಬ್ಯಾಂಡ್ ಅಭಿಯಾನ ಆರಂಭವಾಗುವುದು ಯಾವಾಗ?

ಈ ಅಭಿಯಾನ ರಾಷ್ಟ್ರೀಯ ಯುವ ದಿನ ಎಂದು ಆಚರಿಸಲ್ಪಡುವ ಸ್ವಾಮಿ ವಿವೇಕಾನಂದರ ಜಯಂತಿಯಾದ ಜನವರಿ 12, 2017 ರಂದು ಪ್ರಾರಂಭವಾಗುತ್ತದೆ.

### ವಿವೇಕ ಬ್ಯಾಂಡ್ – ಅಭಿಯಾನದ ಅವಧಿ ಎಷ್ಟು?

ಜನವರಿ 12, 2017ರಂದು ವಿವೇಕ ಬ್ಯಾಂಡ್ ಧರಿಸುವುದರ ಮೂಲಕ ಪ್ರಾರಂಭವಾಗಿ ಜನವರಿ 26ರ ವರೆಗೆ ನಡೆಯಲಿದೆ.

### ವಿವೇಕ ಬ್ಯಾಂಡನ್ನು ಯಾರು ಧರಿಸಬಹುದು?

ಕಾಲೇಜು ವಿದ್ಯಾರ್ಥಿ–ವಿದ್ಯಾರ್ಥಿನಿಯರು, ಪುರುಷ ಮತ್ತು ಮಹಿಳಾ ಉದ್ಯೋಗಿಗಳು ಸೇರಿದಂತೆ ಯಾವುದೇ ವಯಸ್ಸಿನವರೂ ಇದನ್ನು ಧರಿಸಬಹುದು.

### 'ಉತ್ತಮನಾಗು – ಉಪಕಾರಿಯಾಗು' ಎಂದರೇನು?


**'ಉತ್ತಮನಾಗು'** ಎಂದರೆ ತನ್ನೊಳಗೆ ಒಂದು ಒಳ್ಳೆಯ ಬದಲಾವಣೆಯನ್ನು ತಂದುಕೊಳ್ಳಬೇಕೆಂಬ ಸಂಕಲ್ಪ. ಉದಾಹರಣೆಗೆ: ತಂಬಾಕು, ಮದ್ಯ, ಮಾದಕ ವಸ್ತುಗಳ ಸೇವನೆಯಿಂದ ದೂರವಾಗುವುದು, ಹಿರಿಯರಿಗೆ ಗೌರವ ಸಲ್ಲಿಸುವುದು, ಆರೋಗ್ಯಪೂರ್ಣ ಜೀವನ ಶೈಲಿಯ ಅಳವಡಿಕೆ, ಸಾವಯವ ಉತ್ಪನ್ನಗಳ ಉಪಯೋಗ, ಯೋಗಾಭ್ಯಾಸ, ಸಿಟ್ಟು–ವಿಕೃತ ಭಾವನೆಗಳನ್ನು ಹತೋಟಿಯಲ್ಲಿಟ್ಟು ಕೊಳ್ಳುವುದು, ಧನಾತ್ಮಕ ಚಿಂತನೆ, ಒಳ್ಳೆಯ ಹವ್ಯಾಸಗಳನ್ನು ಬೆಳೆಸಿಕೊಳ್ಳುವುದು – ಹೀಗೆ ನಾವೇ ಯೋಚಿಸಿ, ಉತ್ತಮರಾಗುವತ್ತ ನಮ್ಮ ಪ್ರಯತ್ನ ಆರಂಭಿಸುವುದು.

**'ಉಪಕಾರಿಯಾಗು'** ಎಂದರೆ ಸಮಾಜ ಪರಿವರ್ತನೆಯಲ್ಲಿ ಸಹಾಯಕವಾಗಬಲ್ಲ ಚಟುವಟಿಕೆಯಲ್ಲಿ ಭಾಗವಹಿಸುವುದು. ಉದಾಹರಣೆಗೆ: ರಕ್ತದಾನ, ಬಡ ಮಕ್ಕಳಿಗೆ ಉಚಿತ ಪಾಠ, ಖಾದಿ ಧರಿಸುವುದು, ಸ್ವದೇಶಿ ವಸ್ತುಗಳ ಬಳಕೆ, ಪ್ಲಾಸ್ಟಿಕ್ ಬಳಕೆಯನ್ನು ಮಾಡದಿರುವುದು, ಸ್ವಚ್ಛ ಭಾರತ ಅಭಿಯಾನದಲ್ಲಿ ಭಾಗವಹಿಸುವುದು, ಸಾಮಾಜಿಕ ಸಂವೇದನೆಯನ್ನು ವ್ಯಕ್ತಪಡಿಸುವುದು, ಸಾಮೂಹಿಕ ಸೇವಾ ಚಟುವಟಿಕೆಗಳಲ್ಲಿ ಭಾಗವಹಿಸುವುದು ಇತ್ಯಾದಿ. ಒಟ್ಟಿನಲ್ಲಿ ಸಮಾಜಹಿತದ ಯಾವುದಾದರೊಂದು ಕೆಲಸದಲ್ಲಿ ಭಾಗವಹಿಸುವುದು.

### ನೀವು ಹೇಗೆ ಸ್ಫೂರ್ತಿಯಾಗಬಹುದು?

ವಿವೇಕ ಬ್ಯಾಂಡ್ ಧರಿಸಿದ ನಂತರ ನೀವು ಮಾಡಿದ ಸಾಮಾಜಿಕ ಚಟುವಟಿಕೆಯ ಅನುಭವವನ್ನು ಹಂಚಿಕೊಂಡು, ತನ್ಮೂಲಕ ಉಪಕಾರಿಯಾಗಬೇಕು ಎಂಬ ಪ್ರೇರಣೆಯನ್ನು ಇತರರಲ್ಲಿ ತುಂಬಿ. ನಿಮ್ಮ ಅನುಭವಗಳನ್ನು SMS, Whatsapp ಇತ್ಯಾದಿ ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡು ಇದು ಇನ್ನೂ ಹೆಚ್ಚು ಪಸರಿಸುವ ಹಾಗೆ ಪ್ರಯತ್ನಿಸಿ.

ಹೆಚ್ಚಿನ ಮಾಹಿತಿಗಾಗಿ: 8861201060
ನೀವು ಮಾಡಿದ ಒಳ್ಳೆಯ ಕೆಲಸದ ಅನುಭವವನ್ನು www.samarthabharata.orgನಲ್ಲಿ ಹಂಚಿಕೊಳ್ಳಿ



## ಪೇಜಾವರ ಶ್ರೀಗಳಿಂದ ಸವಿತಾ ಸಮಾಜಕ್ಕೆ ಪ್ರತ್ಯೇಕ ಮಠ ಸ್ಥಾಪನೆ

ಸವಿತಾ ಸಮಾಜಕ್ಕಾಗಿ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕು ಕೊಂಚೂರಿನಲ್ಲಿ ಶ್ರೀ ಸವಿತಾ ಮಹರ್ಷಿ ಸಂಸ್ಥಾನ ಮಠ ಸ್ಥಾಪನೆಗೆ ಉಡುಪಿ ಪೇಜಾವರ ಮಠದ ಶ್ರೀವಿಶ್ವೇಶತೀರ್ಥ ಸ್ವಾಮೀಜಿ ಮುಂದಾಗಿದ್ದಾರೆ. ಡಿ. 22ರಂದು ಉಡುಪಿಯಲ್ಲಿ ಶ್ರೀಧರಾನಂದ ಸರಸ್ವತಿ ಸ್ವಾಮೀಜಿಗೆ ಪೀಠದ ಧರ್ಮಾಧಿಕಾರಿಯಾಗಿ ಪಟ್ಟಾಭಿಷೇಕ ನಡೆಯಲಿದೆ. ಕೊಂಚೂರು ಹೊರ ವಲಯದಲ್ಲಿ ಪುಣ್ಯಕೋಟಿ ಗೋಶಾಲೆ ತೆರೆದು ಹಿಂದುತ್ವದ ಪ್ರಚಾರಕರಾಗಿ ದುಡಿಯುತ್ತಿರುವ ಶ್ರೀಧರಾನಂದ ಸರಸ್ವತಿ ಸ್ವಾಮೀಜಿ ಶ್ರೀ ಸವಿತಾ ಮಹರ್ಷಿ ಸಂಸ್ಥಾನ ಪೀಠದ ಮೊದಲ ಧರ್ಮಾಧಿಕಾರಿಯಾಗಲಿದ್ದಾರೆ. ವಾಡಿ ಪಟ್ಟಣದ ನಿವಾಸಿಯಾಗಿರುವ ಇವರು, ಮಂಡ್ಯದ ಆದಿಚುಂಚನಗಿರಿ ಮಠದಲ್ಲಿ ಸಂಸ್ಕೃತ ವಿಷಯದಲ್ಲಿ ಪಾಂಡಿತ್ಯ, ವೈದಿಕ ಸಂಸ್ಕೃತಿ ಪರಿಣತಿ ಪಡೆದಿದ್ದಾರೆ. ಡಿ. 22ರಂದು ಉಡುಪಿ ಕೃಷ್ಣ ಮಠದಲ್ಲಿ ಧರ್ಮಾಧಿಕಾರಿ ನೇಮಕ ಮತ್ತು ಪೀಠ ಪ್ರತಿಷ್ಠಾಪನೆ ಮೊದಲಾದ ಧಾರ್ಮಿಕ ಕಾರ್ಯಗಳು ನಡೆಯಲಿವೆ.

## ತಮಿಳುನಾಡಿನಲ್ಲಿ ಷರಿಯತ್ ಕೋರ್ಟ್ ರದ್ದು


ತಮಿಳುನಾಡಿನಲ್ಲಿ ಕಾರ್ಯನಿರ್ವಹಿಸುವ ಷರಿಯತ್ ಕೋರ್ಟ್‌ಗಳನ್ನು ನಿಷೇಧಿಸಿ ಮದ್ರಾಸ್ ಹೈಕೋರ್ಟ್ ಆದೇಶ ಹೊರಡಿಸಿದೆ. ಬ್ರಿಟನ್ ಮೂಲದ ಅನಿವಾಸಿ ಭಾರತೀಯ ಅಬ್ದುಲ್ ರೆಹಮಾನ್ ಅವರು ಷರಿಯತ್ ಕೋರ್ಟ್ ವಿರುದ್ಧ ಅರ್ಜಿ ಸಲ್ಲಿಸಿದ್ದರು. 'ಪತ್ನಿಯೊಂದಿಗೆ ಮತ್ತೆ ಒಂದಾಗಲು ಚೆನ್ನೈನ ಮಸೀದಿಯೊಂದರ ಷರಿಯತ್ ಕೋರ್ಟ್ ಅವಕಾಶ ನೀಡುತ್ತಿಲ್ಲ. ವಿಚ್ಛೇದನ ನೀಡಲು ಒತ್ತಾಯ ಮಾಡುತ್ತಿದೆ' ಎಂದು ಅವರು ದೂರಿದ್ದರು. ಇದರ ವಿಚಾರಣೆ ನಡೆಸಿದ ಮದ್ರಾಸ್ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಸಂಜಯ್ ಕಿಶನ್ ಹಾಗೂ ನ್ಯಾಯಾಧೀಶ ಆರ್. ಮಾಧವನ್ ಅವರನ್ನೊಳಗೊಂಡ ಪೀಠವು ಇಂತಹ ನ್ಯಾಯಾಲಯಕ್ಕೆ ರಾಜ್ಯದಲ್ಲಿ ಕಾರ್ಯನಿರ್ವಹಿಸಲು ಅವಕಾಶ ನೀಡಬಾರದು ಎಂದು ಸರ್ಕಾರಕ್ಕೆ ಸೂಚಿಸಿದೆ. ಧಾರ್ಮಿಕ ಕೇಂದ್ರಗಳಲ್ಲಿ ಧಾರ್ಮಿಕ ಚಟುವಟಿಕೆ ಮಾತ್ರ ನಡೆಸಬೇಕು ಎಂದು ಎಚ್ಚರಿಸಿದೆ. ಷರಿಯತ್ ಕೋರ್ಟ್‌ಗಳ ಸ್ಥಿತಿಗತಿ ಬಗ್ಗೆ ನಾಲ್ಕು ವಾರದೊಳಗೆ ವರದಿ ನೀಡುವಂತೆ ರಾಜ್ಯಸರ್ಕಾರಕ್ಕೆ ಸೂಚಿಸಿದೆ.




## ಪ್ಲಾಸ್ಟಿಕ್‌ಗೆ ಪರ್ಯಾಯ

ಮಂಗಳೂರು ಮೂಲದ ಕತಾರ್ ದೇಶದ ನಿವಾಸಿ ಅಶ್ವತ್ಥ ಹೆಗಡೆ ನಮ್ಮ ದೇಶದಲ್ಲಿ ಪ್ಲಾಸ್ಟಿಕ್ ಕವರುಗಳಿಂದ ಆಗುತ್ತಿರುವ ತ್ಯಾಜ್ಯ ಸಮಸ್ಯೆಗೆ, ಆ ಕವರ್‌ಗಳನ್ನು ಹಸುಗಳು ತಿಂದು ಅವುಗಳ ಆರೋಗ್ಯಕ್ಕೆ ಆಗುವ ಬಾಧೆಯನ್ನು ತಪ್ಪಿಸಲು ಒಂದು ಪರಿಹಾರ ಕಂಡುಹಿಡಿದಿದ್ದಾರೆ. ನೋಡಲು ಪ್ಲಾಸ್ಟಿಕ್ ನಂತೆಯೇ ಕಾಣುವ ಆಲೂಗಡ್ಡೆ, ಮರಗೆಣಸು, ಜೋಳ, ನೈಸರ್ಗಿಕ ಗಂಜಿ, ಎಣ್ಣೆಯನ್ನು ಬಳಸಿ ಕವರ್‌ಗಳನ್ನು ತಯಾರಿಸಿದ್ದಾರೆ. ಸಾಧಾರಣ ನೀರಿನಲ್ಲಿ ನೆನೆಸಿಟ್ಟರೆ ಈ ಕವರ್‌ಗಳು ಒಂದು ದಿನದಲ್ಲಿ ಕರಗುತ್ತವೆ. ಬಿಸಿನೀರಿನಲ್ಲಿ ನೆನೆಸಿಟ್ಟರೆ 15 ಸೆಕೆಂಡುಗಳಲ್ಲಿ ಕರಗುತ್ತವೆ. ಹಾಗಾಗಿ ಜೈವಿಕ ಅಂಶದ ಈ ಕವರ್‌ಗಳು ಪರಿಸರಕ್ಕೆ ಹಾನಿ ಮಾಡುವ ಸಾಧ್ಯತೆಗಳು ತೀರಾ ಕಡಿಮೆ. ಇನ್ನೊಂದು ಹೆಗ್ಗಳಿಕೆಯೆಂದರೆ ಈ ಕವರ್ ತಯಾರಿಸುವಲ್ಲಿ ಯಾವುದೇ ರಾಸಾಯನಿಕ ಅಂಶಗಳನ್ನು ಬಳಸಿಲ್ಲ. ಈ ಕವರ್‌ಗಳಿಂದ ಯಾವುದೇ ಹಾನಿಯಾಗುವುದಿಲ್ಲ ಎಂಬುದನ್ನು ನಿರೂಪಿಸಲು ಸ್ವತಃ ಅಶ್ವತ್ಥ ಹೆಗಡೆಯವರು ಅವುಗಳನ್ನು ತಿಂದಿದ್ದಾರೆ. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಈ ರೀತಿಯ ಕವರ್‌ಗಳಿಗೆ ಅನುಮತಿ ಸೂಚಿಸಿದೆ. ಮಾರುಕಟ್ಟೆಯಲ್ಲಿ ಇವನ್ನು ಕಾಣುವುದಷ್ಟೇ ಬಾಕಿ.

## ಮಗಳ ಮದುವೆ : ಬಡವರಿಗೆ ಸೂರು



ಅಜಯ್ ಮುನೋತ್, ಔರಾಂಗಬಾದ್‌ನ ಉದ್ಯಮಿ ಮಗಳ ಮದುವೆ ಖರ್ಚಿಗೆ ಇಟ್ಟಿದ್ದ ಹಣದಲ್ಲಿ 40 ಮನೆಗಳನ್ನು ನಿರ್ಗತಿಕರಿಗೆಂದೇ ಕಟ್ಟಿಕೊಟ್ಟು ಶ್ಲಾಘನೀಯ ಕಾರ್ಯ ಮಾಡಿದ್ದಾರೆ. ಮಗಳ ಮದುವೆಗಾಗಿ ಸುಮಾರು 70 ರಿಂದ 80 ಲಕ್ಷ ರೂಪಾಯಿ ಖರ್ಚು ಮಾಡಲು ಹಣಹೊಂದಿಸಿದ್ದ ಅಜಯ್ ನಂತರ ಮನಸ್ಸು ಬದಲಾಯಿಸಿ ಆ ಹಣದಲ್ಲಿ ಸುಮಾರು 40 ಬಡ ಸಂಸಾರಗಳಿಗೆ ಸೂರು ಕಲ್ಪಿಸಿದರು. ತನ್ನ ತಂದೆಯ ಕೆಲಸದಿಂದಾಗಿ ಮಗಳು ಶ್ರೇಯಾ ಕೂಡ ಖುಷಿಯಾಗಿದ್ದಾರೆ. ಅಪ್ಪ ನನ್ನ ಮದುವೆಗೆ ಅದ್ಭುತ ಉಡುಗೊರೆಯನ್ನೇ ನೀಡಿದ್ದಾರೆ ಎಂದು ಅಭಿಮಾನದಿಂದ ಹೇಳುತ್ತಾರೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.